## ಪದಬಂಧ




ಎಡದಿಂದ ಬಲಕ್ಕೆ:

1. ಅನುವಾದ ಮಾಡಲು ಬಂದವನೊಡನೆ ಇದೆಂಥ ಗಾಢ ಸ್ನೇಹ! 4
3. ಭಾರವೆನಿಸುವ ಈ ಹೊಣೆಗಾರಿಕೆಯನ್ನು ಹೇಗಾದರೂ ನಿರ್ವಹಿಸು 3
4. ಪಾನೀಯ ಮಾರಾಟ ನಿಯಮ ಕುರಿತದ್ದು ಈ ಆಜ್ಞಾಪತ್ರ 3
6. ರಸ್ತೆಯ ಪಕ್ಕದಲ್ಲೇ ತಯಾರಿಸಿದ್ದರೂ ಎಷ್ಟು ರುಚಿಕರ ಅಡುಗೆ ನೋಡಿ 4
7. ಈ ಬಗೆಯ ಉಡುಪನ್ನು ಕಾಣಲು ಪಶ್ಚಿಮ ದಿಕ್ಕೇ ಸರಿ 4
8. ಮಹತ್ವವೇನನ್ನೂ ಅರಿಯಲಾರ, ಬುದ್ಧಿಗೇಡಿ 4
10. ನೇರಿಳೆ ಸಸಿಗಳನ್ನು ನೆಟ್ಟ ವೇಳೆ ನಡುರಾತ್ರಿ ಆಗಿತ್ತು 4
12. ವೈಮನಸ್ಯವನ್ನು ದೂರ ಮಾಡಿದ್ದು ಈ ಕಾಡಿನ ಹೂವು 4
14. ಬಂಡೆ ಏರಿ ಬಂದು ಎಲ್ಲರ ಮುಂದೆ ಬರೀ ಜಂಭದ ಮಾತು 4
16. ಮರುಳು ಮಾಡುವ ನಾದ ಹೊಮ್ಮಿಸುವ ಕೃಷ್ಣನ ವಾದ್ಯ 3
17. ಮರದಲ್ಲೇ ಕಳಿತ ಹಣ್ಣು, ಎಷ್ಟು ಸಿಹಿ! 3
18. ಕೂಡಿಡುವ ಹಣದ ಪ್ರಮಾಣಕ್ಕೂ ನಿಯಂತ್ರಣವೇ? 4

ಮೇಲಿಂದ ಕೆಳಕ್ಕೆ:

1. ಎಲ್ಲವನ್ನೂ ಅಸ್ಥಿರಗೊಳಿಸಲು ಮುಂದಾದ ಕ್ರೂರ ರಕ್ಕಸ 3
2. ಕದನ ತಪ್ಪಿಸಲು ಮುಂದಾದವನು ಭಾರೀ ಹಣವಂತ 3
3. ಸ್ವಾಭಾವಿಕವಾಗಿಯೇ ವರ್ತಿಸುವರೆಂಬ ಆಶ್ವಾಸನೆ ಸಿಕ್ಕಿದೆ 4
5. ಪಂದ್ಯಾರಂಭಕ್ಕೆ ಮೊದಲು ಆರತಿ, ಅಲ್ಲಿನ ಸಂಪ್ರದಾಯ 3
7. ಪಲ್ಯಕ್ಕೆ ಅನ್ನ ಕಲಸಿದೊಡನೆ ಕಾಲ್ಕಿತ್ತನಲ್ಲ! 4
9. ವ್ಯಾಕರಣವನ್ನು ಮನನ ಮಾಡಲು ಹೀಗೊಂದು ಹೊಸ ರೀತಿ 4
11. ಮೂರೆಣಿಸುವುದರೊಳಗೆ ವಸೂಲಾಯಿತು ಶುಲ್ಕ 3
13. ವಿನಾಯಕನ ಆರಾಧನೆ ಕುರಿತದ್ದು ಅವನು ಕಂಡ ಕನಸು 4
14. ಕಥೆಯನ್ನಿಡೀ ಕೇಳಿ ಬಂದ ತರುವಾಯ ...? 3
15. ಮೇಣದ ಅರಮನೆಯನ್ನು ನಿರ್ಮಿಸಿದವನೇ ಆಕೆಯ ಗಂಡ 3

---

### 14–05–2020 ಉತ್ತರಗಳು

ಎಡದಿಂದ ಬಲಕ್ಕೆ:

1. ಔಷಧ 3. ವರದಾ 4. ಮಸ್ತಕ 6. ಶುಭಕರ 7. ಗೆಣೆಕಾರ 9. ತೆರೆಮರೆ 11. ಮೇಜವಾನಿ 15. ಪುತ್ಥಳಿ 16. ರಜನಿ 17. ಕೆರಳು

ಮೇಲಿಂದ ಕೆಳಕ್ಕೆ:

1. ಔದಾರ್ಯ 2. ಧಮಕಿ 3. ವಣಿಕ 5. ಕರುಣೆ 6. ಶುಭ್ರತೆ 8. ರಧಾ೯ನಿ (=ನಿರ್ಧಾರ ತಲೆಕೆಳಗು) 10. ಮಲೆಪು 12. ಜನನಿ 13. ಬಾಳಿಕೆ 14. ಹರಳು

ಪ್ರಶ್ನಾಂಕಣ

# ಕಿಂಗ್ ಟಟ್: ಜಗತ್ಪ್ರಸಿದ್ಧ ಹೇಗೆ?

ಕಿಂಗ್ ಟಟ್ ಅವನೊಬ್ಬ 'ಫೆರೊ'. ಎಂದರೆ, ಆತ ಪ್ರಾಚೀನ ಈಜಿಪ್ಟ್ ಅನ್ನು ಆಳಿದ ಒಬ್ಬ ಅರಸ. ಪುರಾತನ ಈಜಿಪ್ಟ್ ದೇಶವನ್ನು ಆಳಿದ ಫೆರೊಗಳು ಹಲವರಿದ್ದರೂ ಟಟ್ ಮಾತ್ರ ಎಲ್ಲರಿಗಿಂತಲೂ ಹೆಚ್ಚು ಪರಿಚಿತ; ಈಗಲೂ ಆತ ಜಗದ್ವಿಖ್ಯಾತ. ಎಷ್ಟೆಂದರೆ ಈಜಿಪ್ಟ್ ಎಂದೊಡನೆ ನೆನಪಾಗುವ 'ನೈಲ್ ನದಿ' (ಚಿತ್ರ1) ಮತ್ತು 'ಪಿರಮಿಡ್' (ಚಿತ್ರ2) ಗಳಷ್ಟೇ ಆತನದೂ ಪ್ರಸಿದ್ಧಿ!

ರಾಜ ಟಟ್‌ನ ಪೂರ್ಣ ಹೆಸರು 'ಟುಟಂಖಮನ್'. ಹಾಗೆಂದರೆ ಸಕಲ ದೇವರುಗಳ ಅರಸನಾದ 'ಅಮುನ್ ನ ಜೀವಂತ ಸ್ವರೂಪ' ಎಂದರ್ಥ. ಪ್ರಾಚೀನ ಈಜಿಪ್ಟ್ ಅನ್ನು ವಂಶಪಾರಂಪರ್ಯವಾಗಿ ಆಳಿದ ಫೆರೊ ಅರಸರ 18ನೆಯ ವಂಶಾವಳಿಯ 12ನೆಯ ಮತ್ತು ಕಟ್ಟ ಕಡೆಯ ಫೆರೊ ಆತ. ಅವನ ತಂದೆ 'ಅಖಿನಾಟೆನ್'ನ ಮರಣದ ನಂತರ ಕ್ರಿಸ್ತ ಪೂರ್ವ 1332ರ ಸುಮಾರಿಗೆ (ಎಂದರೆ ಈಗ್ಗೆ 3352 ವರ್ಷ ಹಿಂದೆ!) ಒಂಬತ್ತೇ ವರ್ಷ ವಯಸ್ಸಿನವನಾಗಿದ್ದ ಟಟ್ ಫೇರೋ ಆಗಿ ಅಭಿಷಿಕ್ತನಾದ. ಮಾರ್ಗದರ್ಶಕರ ನೆರವಿನಿಂದ ರಾಜ್ಯಭಾರ ನಡೆಸಿದ ಈ ಫೆರೋನ ವಿಶೇಷ ಸಾಧನೆಗಳಾವುವೂ ಸ್ಪಷ್ಟವಾಗಿ ತಿಳಿದಿಲ್ಲ. ಬಾಲ್ಯದಲ್ಲೇ ಅರಸನಾದ ಟುಟಂಖಮನ್ ಕ್ಷಿಪ್ರದಲ್ಲೇ ಅವನ ಹತ್ತೊಂಬತ್ತನೆಯ ವಯಸ್ಸಿನಲ್ಲೇ ಮೃತನಾದ. ಮಮ್ಮೀಕರಿಸಲಾದ ಆತನ ಶರೀರವನ್ನು ಈಜಿಪ್ಟ್‌ನಲ್ಲೇ ಇರುವ 'ಅರಸರ ಕಣಿವೆ' ( ದಿ ವ್ಯಾಲೀ ಆಫ್ ದಿ ಕಿಂಗ್ಸ್) ಯಲ್ಲಿ, ವಿಶೇಷ ಗೋರಿಯೊಂದರಲ್ಲಿ ಹೂಳಲಾಯಿತು. ಆಗಿನಿಂದ ಕಿಂಗ್ ಟಟ್ ಹೊರ ಜಗತ್ತಿಗೆ ಅಜ್ಞಾತನಾದ.

ಹಾಗಿದ್ದದ್ದು ಇಸವಿ 1922ರವರೆಗಷ್ಟೇ. ಆ ವರ್ಷ ವಿಖ್ಯಾತ ಬ್ರಿಟಿಷ್ ಪುರಾತತ್ವ ವಿಜ್ಞಾನಿ 'ಹೋವರ್ಡ್ ಕಾರ್ಟರ್' ಕಿಂಗ್ ಟಟ್‌ನ ಗೋರಿಯನ್ನು ಪತ್ತೆ ಹಚ್ಚಿದ; ಅದರ ಉತ್ಖನನ ನಡೆಸಿದ. ವಿಸ್ಮಯ ಏನೆಂದರೆ, ಇತರೆಲ್ಲ ಅರಸರ ಗೋರಿಗಳಂತಲ್ಲದೆ ಟಟ್‌ನ ಗೋರಿ ದರೋಡೆಕೋರರ ಕಣ್ಣಿಗೆ ಬೀಳದೆ ಉಳಿದಿತ್ತು; ಅದರೊಳಗಿನ ಸಕಲ ವಸ್ತುಗಳೂ ಸುರಕ್ಷಿತವಾಗಿದ್ದುವು.

ಕಿಂಗ್ ಟಟ್‌ನ ಗೋರಿಯೊಳಗೆ ಪತ್ತೆಯಾದ ಕಲಾಕೃತಿಗಳು ಮತ್ತು ಅಮೂಲ್ಯ ವಸ್ತುಗಳ ಸಂಪತ್ತು ಜಗತ್ತನ್ನೇ ಬೆರಗಾಗಿಸುವಂತಿತ್ತು. 110 ಕಿಲೋ ತೂಕದ ಅಪ್ಪಟ ಬಂಗಾರದ ಶವಪೆಟ್ಟಿಗೆಯೊಳಗೆ ಕಿಂಚಿತ್ತೂ ಕೆಡದಂತೆ ಸಂಸ್ಕರಿಸಿ ಮಲಗಿಸಿದ್ದ ಟಟ್‌ನ ಕಳೇಬರ, ಅದಕ್ಕೆ ತೊಡಿಸಲಾಗಿದ್ದ ಬಂಗಾರದ ಉಡುಗೆ, ಮುಖಗವಸು (ಚಿತ್ರ 3), ಸಾವಿರಾರು ರಾಜಯೋಗ್ಯ ಆಭರಣಗಳು, ನೂರಾರು ವಸ್ತ್ರ ಉಡುಗೆಗಳು, ಪೀಠೋಪಕರಣಗಳು, ಸಮರ ಶಸ್ತ್ರಾಸ್ತ್ರಗಳು, ಕಲಾಮಯ ಪ್ರತಿಮೆಗಳು, ವಿವಿಧ ತೈಲಗಳು, ಆಟಿಗೆಗಳು... ಇತ್ಯಾದಿ! ಹಾಗೆ ಹೊರತೆಗೆಯಲಾದ ಎಲ್ಲ ವಸ್ತುಗಳ ಒಟ್ಟು ಸಂಖ್ಯೆ 5,400! ಮ್ಯೂಸಿಯಂಗಳಲ್ಲಿ ಭದ್ರ ಕಾವಲಿನಲ್ಲಿ ಪ್ರದರ್ಶನಗೊಂಡಿರುವ, ಭಾರೀ ಐತಿಹಾಸಿಕ ಮಹತ್ವವೂ ಇರುವ ಈ ಎಲ್ಲ ಕಲಾಮಯ ನಿರ್ಮಿತಿಗಳದು ಒಂದೊಂದರದೂ ಅಗಣಿತ ಮೌಲ್ಯ. ಇವುಗಳಿಂದಾಗಿಯೇ ಕಿಂಗ್ ಟಟ್ ವಿಶ್ವವಿಖ್ಯಾತ.




■ ಎನ್. ವಾಸುದೇವ್